ಹುಲಿಯನ್ನು ಇದುವರೆಗೆ ಯಾರೂ ಕೇಳಿಲ್ಲ. ಆ ವಿಚಾರ ಬಂದಾಗ ಅದನ್ನು ಪರಿಶೀಲನೆ ಮಾಡಿ ನೋಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಹುಲಿಯನ್ನು ಕೇಳಿದರೆ ಪರಿಶೀಲನೆ ಮಾಡುತ್ತೀರಾ?

ಶ್ರೀ ಎಂ.ಪಿ. ಕೇಶವಮೂರ್ತಿ : ಪರಿಶೀಲನೆ ಮಾಡಿ ಕೊಡುವುದಕ್ಕೆ ಸಾಧ್ಯವೆ ಇಲ್ಲವೆ ಎಂಬುದನ್ನು ನೋಡಿ ಕೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಡಿ.ಬಿ. ಚಂದ್ರೇಗೌಡರ ಪ್ರಶ್ನೆಯನ್ನು ಕಂದಾಯ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ. ಇಲ್ಲಿಗೆ ಪ್ರಶ್ನೋತ್ತರಗಳ ಅವಧಿ ಮುಗಿಯಿತು.

## ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ 2ನೇ ಪಟ್ಟಿಯಲ್ಲಿರುವ 20 ಪ್ರಶ್ನೆಗಳ ಪೈಕಿ ಪ್ರಶ್ನೆ ಸಂಖ್ಯೆ 36ನ್ನು ಹೊರತುಪಡಿಸಿ ಇನ್ನುಳಿದ 19 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಬೈಲಹೊಂಗಲ ತಾಲ್ಲೂಕಿನ ಮಾಟೋಳ್ಳಿ ಗ್ರಾಮದಲ್ಲಿ ಮೀನುಗಾರರಿಗೆ ನಿವೇಶನ**

122 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ); ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕೆಂಗಾನೂರು ಹಾಗೂ ಸೌದತ್ತಿ ತಾಲ್ಲೂಕಿನ ಮಾಟೋಳ್ಳಿ ಗ್ರಾಮಗಳಲ್ಲಿ ಮೀನುಗಾರರಿಗೆ ಮನೆಗಳನ್ನು ಕಟ್ಟಿಕೊಡಲಾಗುವುದೆಂದು ಆಶ್ವಾಸನೆ ನೀಡಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;*

ಆ) *ಆ ಆಶ್ವಾಸನೆ ಪ್ರಕಾರ, ಸರ್ಕಾರದವರು ಅಲ್ಲಿ ಮೀನುಗಾರರಿಗೆ ಮನೆಗಳನ್ನು ಕಟ್ಟಲು ಯಾವ ಕ್ರಮ ಕೈಗೊಂಡಿರುವವರು; ಹಾಗೂ ಈಗ ಮನೆಗಳನ್ನು ಕಟ್ಟುವ ಕೆಲಸ ಯಾವ ಹಂತದಲ್ಲಿರುವುದು;*

ಇ) *ಮೀನುಗಾರರಿಗೆ ತಮ್ಮ ಸೊಸೈಟಿ ಮುಖಾಂತರ ಮನೆಗಳನ್ನು ಕಟ್ಟಲು ಪುಕ್ಕಟೆಯಾಗಿ ಸ್ಥಳವನ್ನು ಒದಗಿಸಿದ ಸಂಗತಿ ನಿಜವೇ;*

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಹೌದು.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೌದು.

**ಬೆಂಗಳೂರು ನಗರದಲ್ಲಿ ವಿದ್ಯಾ ಭವನವನ್ನು ನಿರ್ಮಿಸುವುದರ ಬಗ್ಗೆ**

119 - ಶ್ರೀ ಆರ್.ವಿ. ದೇವರಾಜ್ (ಚಾಮರಾಜಪೇಟೆ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಶಿಕ್ಷಣ ಇಲಾಖೆಯು ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಕಛೇರಿಗಳ ಸಂಖ್ಯೆ ಎಷ್ಟು?

ಆ) ಅವುಗಳ ಪೈಕಿ ಎಷ್ಟು ಕಛೇರಿಯು ಬಾಡಿಗೆ ಕಟ್ಟಡದಲ್ಲಿರುತ್ತದೆ.

ಇ) ಅವುಗಳ ಬಾಡಿಗೆಗೆ ಸರ್ಕಾರಕ್ಕೆ ನೀಡುತ್ತಿರುವ ಹಣವೆಷ್ಟು?

ಈ) ಬೆಂಗಳೂರಿನ ಮೈಸೂರು ಬ್ಯಾಂಕ್ ಚೌಕದ ಬಳಿ ಇರುವ ಸೆಂಟ್ರಲ್ ಪ್ರೌಢ ಶಾಲೆ ಕಟ್ಟಡದ ಜಾಗದಲ್ಲಿ ಎಲ್ಲಾ ಶಿಕ್ಷಣ ಇಲಾಖೆಯ ಕಛೇರಿಗಳನ್ನು ಒಂದೇ ಕಡೆ ಇರುವಂತೆ ಮಾಡಲು ವಿದ್ಯಾ ಭವನ. ನಿರ್ಮಿಸುವ ಬಗ್ಗೆ ಸರ್ಕಾರ ನಿರ್ಧಾರ ಕೈಗೊಂಡಿದೆಯೇ?

ಉ) ಹಾಗಿದ್ದರೆ ಈ ವಿದ್ಯಾಭವನಕ್ಕೆ ತಗಲುವ ವೆಚ್ಚವೆಷ್ಟು?

ಊ) ಈ ವಿದ್ಯಾ ಭವನದ ನಿರ್ಮಾಣವನ್ನು ಯಾವಾಗ ಪ್ರಾರಂಭಿಸಲಾಗಿದೆ.

ಋ) ಆ ವಿದ್ಯಾ ಭವನದ ಕಟ್ಟಡ ಯಾವಾಗ ಪೂರ್ಣಗೊಳ್ಳುತ್ತದೆ.

ಋ) 1993-94ರಲ್ಲಿ ಅದಕ್ಕಾಗಿ ಒದಗಿಸಿರುವ ಹಣವೆಷ್ಟು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) 1) ಆಯುಕ್ತರು - 1
ನಿರ್ದೇಶಕರು (ಪ್ರಾ. ಪ್ರೌಢ) - 2
2) ಜಂಟಿ ನಿರ್ದೇಶಕರವರ ಕಛೇರಿ - 1
3) ಉಪ ನಿರ್ದೇಶಕರ ಕಛೇರಿ - 3
4) ಸಹಾಯಕ ಶಿಕ್ಷಣಾಧಿಕಾರಿ ಕಛೇರಿ - 6

ಆ) ಎರಡು

ಇ) ವರ್ಷಕ್ಕೆ ಒಟ್ಟು 2,52,084-00 ರೂ.ಗಳು

ಈ) ಹೌದು

ಶಿಕ್ಷಕರ ಕಲ್ಯಾಣನಿಧಿ ಮತ್ತು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗೆ ಈ ಭವನವನ್ನು ಕಟ್ಟಲು ಪರವಾನಿಗೆ ನೀಡಿದೆ.

ಉ) ರೂ. 6.00 ಕೋಟಿಗಳು

ಊ) ಇನ್ನೂ ಪ್ರಾರಂಭಿಸಲಾಗಿಲ್ಲ.

ಋ) ಅಂದಾಜು 2 ವರ್ಷಗಳ ಕಾಲಾವಧಿ ಬೇಕಾಗುವುದು.

ೠ) ಸರ್ಕಾರದ ವತಿಯಿಂದ ಒದಗಿಸಲಾಗಿರುವುದಿಲ್ಲ, ಶಿಕ್ಷಕರ ಕಲ್ಯಾಣ ನಿಧಿಯ ಮೂಲಕ ಕಟ್ಟಡ ನಿರ್ಮಾಣ ಕಾರ್ಯಕ್ರಮ ನಡೆಸಲಾಗುತ್ತಿದೆ.

**ಪಶುಸಂಗೋಪನೆ ಇಲಾಖೆಯಲ್ಲಿ ಜನವರಿ 1993ರಿಂದ ಭರ್ತಿ ಮಾಡಿರುವ ಹುದ್ದೆಗಳ ಸಂಖ್ಯೆ ಕುರಿತು**

142 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜನವರಿ 1993ರಿಂದ ಡಿಸೆಂಬರ್ ಅಂತ್ಯದವರೆಗೆ ಪಶುಸಂಗೋಪನಾ ಇಲಾಖೆಯಲ್ಲಿ ಬಡ್ತಿ ಮಾಡಿರುವ ವಿವಿಧ ಹುದ್ದೆಗಳೆಷ್ಟು ;

ಆ) ಆ ಹುದ್ದೆಗಳನ್ನು ಬಡ್ತಿ ಮಾಡಲು ಉದ್ಯೋಗ ವಿನಿಮಯ ಕೇಂದ್ರಗಳಿಂದ ಹಾಗೂ ಜಾಹೀರಾತು ಮೂಲಕ ಅರ್ಜಿಗಳನ್ನು ಕರೆಯಲಾಗಿತ್ತೆ;